**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ ತುಮಕೂರು**

**ಸತ್ರ ಮೊಕದ್ದಮೆ ಸಂಖ್ಯೆ.106/2023**

**ಫಿರ್ಯಾದುದಾರರುಃ**

ರಾಜ್ಯದ ಪರವಾಗಿ ಗುಬ್ಬಿ ಪೋಲೀಸ್

ವಿರುದ್ಧ

**ಆರೋಪಿತ ಃ** ಃ ಕುಮಾರ

| | | |
|---|---|---|
| ಆರೋಪಿಯ ಹೆಸರು | : | ಕುಮಾರ |
| ತಂದೆಯ ಹೆಸರು | : | ರಾಜಣ್ಣ |
| ವಯಸ್ಸು | : | 41 ವರ್ಷ |
| ಉದ್ಯೋಗ | : | ಕೂಲಿ |
| ವಾಸಸ್ಥಳ | : | ಬಾಬು ಜಗಜೀವನ್ ರಾಂ ನಗರ, ಗುಬ್ಬಿ |

**ಅಪರಾಧ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯಲ್ಲಿನ ಆರೋಪಿಯ ಹೇಳಿಕೆ**

ಪ್ರಶ್ನೆ-1: ನ್ಯಾಯಾಲಯದಲ್ಲಿ ಅಭಿಯೋಜನೆಯ ಪರ ಮಾಡಿದ ಸಾಕ್ಷಿಗಳ ಸಾಕ್ಷ್ಯವನ್ನು ನೀವು ಕೇಳಿದ್ದೀರಾ?

ಉತ್ತರಃ ಹೌದು

ಪ್ರಶ್ನೆ 2: ಪ್ರಾ ಸಾ 9 ಆರ್.ಸಿ.ಜಯರಾಮಯ್ಯ, ಮುಖ್ಯ ಪೇದೆ ಇವರು ತಮ್ಮ ಸಾಕ್ಷ್ಯದಲ್ಲಿ ದಿ.18.07.2022 ರಂದು ಆತ ಗುಬ್ಬಿ ಪೋಲೀಸ್ ಠಾಣೆಯಲ್ಲಿ ಎಸ್.ಹೆಚ್.ಓ. ಕರ್ತವ್ಯದಲ್ಲಿದ್ದಾಗ ಬೆಳಿಗ್ಗೆ 8.30 ಗಂಟೆಗೆ ದೂರುದಾರರಾದ ಜಯಮ್ಮ ಠಾಣೆಗೆ ಹಾಜರಾಗಿ ದೂರನ್ನು ನೀಡಿದ್ದು, ಅದನ್ನು ಸ್ವೀಕರಿಸಿ, ಪ್ರಕರಣವನ್ನು ನೋಂದಾಯಿಸಿ, ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿ, ಮುಂದಿನ ತನಿಖೆಯನ್ನು ಪಿಎಸ್ಐ ರವರಿಗೆ ವಹಿಸಿಕೊಟ್ಟಿದ್ದಾಗಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳಲು ಇಚ್ಛಿಸುವಿರಿ ?

ಉತ್ತರ ಃ ಸುಳ್ಳು

ಪ್ರಶ್ನೆ 3 ಃ ಪ್ರಾ ಸಾ 10 ಹೆಚ್.ಬಿ. ಶಿವಣ್ಣ, ಎಎಸ್ಐ ಇವರು ತಮ್ಮ ಸಾಕ್ಷ್ಯದಲ್ಲಿ ದಿ.18.07.2022 ರಂದು ಪಿಎಸ್ಐ ಮುತ್ತುರಾಜ್ ರವರ ಮೌಖಿಕ ಆದೇಶದಂತೆ ಮಹಿಳಾ ಮುಖ್ಯ ಪೇದೆ 299 ಗೀತಾ ಎಲ್. ಎಂಬುವವರೊಂದಿಗೆ ಕೃತ್ಯ ನಡೆದ ಸ್ಥಳವಾದ ಗುಬ್ಬಿ ಟೌನ್ ಬಾಬು ಜಗಜೀವನ್ ರಾಮ್ ನಗರದ ಮೃತೆ ವಾಸವಾಗಿದ್ದ ಗುಡಿಸಲಿಗೆ ಹೋಗಿ ಮೃತೆ ಮಾಲಾಳ ಮೃತದೇಹದ ತನಿಖಾ ಪಂಚನಾಮೆ ಮಾಡಿ, ಆ ಸಮಯದಲ್ಲಿ ಮೃತಳ ಅಕ್ಕ ರಾಮಕ್ಕ ಮತ್ತು ಸಾಕ್ಷಿ ನರಸಿಂಹಮೂರ್ತಿ ರವರ ಹೇಳಿಕೆಯನ್ನು ಮಾಡಿಕೊಂಡಿದ್ದಾಗಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳಲು ಇಚ್ಛಿಸುವಿರಿ ?

ಉತ್ತರ ಃ ಸುಳ್ಳು

ಪ್ರಶ್ನೆ 4 ಃ ಪ್ರಾ ಸಾ 10 ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಆ ಸಮಯದಲ್ಲಿ ಸ್ಥಳದಲ್ಲಿದ್ದ ನೇಣು ಹಾಕಿಕೊಂಡಿದ್ದ ಸೀರೆ ಮತ್ತು ತಲೆಯ ಬಳಿ ಇದ್ದ ಡೆತ್ ನೋಟ್ ಬರೆದಿದ್ದಂತಹ ನೋಟ್ ಬುಕ್ ಅನ್ನು ಅಮಾನತ್ತುಪಡಿಸಿಕೊಂಡು, ಮೃತದೇಹವನ್ನು ಮಹಿಳಾ ಮುಖ್ಯ ಪೇದೆಯ ಜೊತೆಗೆ ಮರಣೋತ್ತರ ಪರೀಕ್ಷೆಗಾಗಿ ಕಳುಹಿಸಿದ್ದಾಗಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳಲು ಇಚ್ಛಿಸುವಿರಿ ?

ಉತ್ತರ ಃ ಸುಳ್ಳು

ಪ್ರಶ್ನೆ 5 ಃ ಪ್ರಾ ಸಾ 11 ಡಾ.ಭಾವನಾ ದೇಸಾಯಿ, ವೈಜ್ಞಾನಿಕ ಅಧಿಕಾರಿ ಇವರು ತಮ್ಮ ಸಾಕ್ಷ್ಯದಲ್ಲಿ ದಿ.10.08.2022 ರಂದು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಗುಬ್ಬಿ ಪೋಲೀಸ್ ಠಾಣೆಯಿಂದ ಮೃತಳ ಪ್ರಮಾಣಿತ ಕೈ ಬರಹ ಮತ್ತು ಮೃತಳ ಕೈ ಬರಹ ಇದ್ದ ನೋಟ್ ಪುಸ್ತಕವನ್ನು ಪರೀಕ್ಷೆಗಾಗಿ ಸ್ವೀಕರಿಸಿದ್ದು, ಎರಡೂ ಬರವಣಿಗೆಗಳನ್ನು ಪರೀಕ್ಷಿಸಿ, ಪ್ರಮಾಣಿತ ಕೈಬರಹವನ್ನು ಬರೆದ ವ್ಯಕ್ತಿಯೇ ಪ್ರಶ್ನಿತ ಕೈಬರಹವನ್ನು ಬರೆದಿದ್ದಾರೆಂದು ವರದಿ ನೀಡಿರುವುದಾಗಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳಲು ಇಚ್ಛಿಸುವಿರಿ ?

ಉತ್ತರ ಃ ಸುಳ್ಳು

ಪ್ರಶ್ನೆ 6 ಃ ಪ್ರಾ ಸಾ 12 ಮುತ್ತುರಾಜು ಜೆ. ಪಿಎಸ್ಐ ಇವರು ತಮ್ಮ ಸಾಕ್ಷ್ಯದಲ್ಲಿ ದಿ.18.07.2022 ರಂದು ಈ ಪ್ರಕರಣದ ಕಡತವನ್ನು ಠಾಣಾ ಹೆಚ್ ಸಿ 294 ಜಯರಾಮಯ್ಯನವರಿಂದ ಪಡೆದು, ಅದೇ ದಿನ ಆರೋಪಿಯಾದ ನಿನ್ನ ಪತ್ತೆ ಬಗ್ಗೆ

ಸಿಬ್ಬಂದಿಯನ್ನು ನೇಮಕ ಮಾಡಿದ್ದು, ಸಿಬ್ಬಂದಿಯವರು ನಿನ್ನನ್ನು ವಶಕ್ಕೆ ಪಡೆದು ಹಾಜರುಪಡಿಸಿ, ವರದಿ ನೀಡಿರುವುದಾಗಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳಲು ಇಚ್ಛಿಸುವಿರಿ **?**

ಉತ್ತರ : ಸುಳ್ಳು

ಪ್ರಶ್ನೆ **7** : ಪ್ರಾ ಸಾ **12** ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿ.**19.07.2022** ರಂದು ಆರೋಪಿ ನೀನು ತೋರಿಸಿದ ಕೃತ್ಯ ನಡೆದ ಸ್ಥಳದ ಪಂಚನಾಮೆಯನ್ನು ಸಾಕ್ಷಿದಾರರಾದ ಶ್ರೀನಿವಾಸ್ ಮತ್ತು ಶಿವಕುಮಾರ್ ರವರ ಸಮಕ್ಷಮ ಜರುಗಿಸಿರುವುದಾಗಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳಲು ಇಚ್ಛಿಸುವಿರಿ **?**

ಉತ್ತರ : ಸುಳ್ಳು

ಪ್ರಶ್ನೆ **8** : ಪ್ರಾ ಸಾ **12** ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ನಿನ್ನನ್ನು ದಸ್ತಗಿರಿ ಮಾಡಿ, ದಸ್ತಗಿರಿ ಕ್ರಮ ಅನುಸರಿಸಿ, ವೈದ್ಯಕೀಯ ತಪಾಸಣೆಗೆ ಒಳಪಡಿಸಿ, ರಿಮ್ಯಾಂಡ್ ಅರ್ಜಿಯೊಂದಿಗೆ ನ್ಯಾಯಾಲಯದ ಮುಂದೆ ಹಾಜರುಪಡಿಸಿರುವುದಾಗಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳಲು ಇಚ್ಛಿಸುವಿರಿ **?**

ಉತ್ತರ : ಸುಳ್ಳು

ಪ್ರಶ್ನೆ **9** : ಪ್ರಾ ಸಾ **12** ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿ.**25.07.2022** ರಂದು ಮೃತಳ ಮರಣೋತ್ತರ ಪರೀಕ್ಷಾ ವರದಿಯನ್ನು ಪಡೆದು, ದಿ.**26.07.2022** ರಂದು ಫಿರ್ಯಾದಿ ಜಯಮ್ಮನವರು ಮೃತಳ ಕೈಬರಹವನ್ನು ತಂದು ಹಾಜರುಪಡಿಸಿದ್ದು, ಅದನ್ನು ಸಾಕ್ಷಿದಾರರಾದ ಮಂಜುನಾಥ ಮತ್ತು ರಂಗಪ್ಪನವರ ಸಮಕ್ಷಮ ಅಮಾನತ್ತುಪಡಿಸಿಕೊಂಡು, ಅಮಾನತ್ತು ಪಂಚನಾಮೆಯನ್ನು ಜರುಗಿಸಿರುವುದಾಗಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳಲು ಇಚ್ಛಿಸುವಿರಿ **?**

ಉತ್ತರ : ಸುಳ್ಳು

ಪ್ರಶ್ನೆ **10** : ಪ್ರಾ ಸಾ **12** ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿ.**07.08.2022** ರಂದು ಸದರಿ ಅಮಾನತ್ತುಪಡಿಸಿಕೊಂಡ ಮೃತಳ ಕೈಬರಹ ಇರುವ ನೋಟ್ ಪುಸ್ತಕ ಮತ್ತು ಪ್ರಶ್ನಿತ ಮೃತಳ ಕೈಬರಹ ಇರುವ ದಾಖಲೆಗಳನ್ನು ಎಫ್.ಎಸ್.ಎಲ್.ಗೆ ಕಳುಹಿಸಿಕೊಟ್ಟು, ನಂತರ

ಆ ಬಗ್ಗೆ ವರದಿಯನ್ನು ಪಡೆದಿರುವುದಾಗಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳಲು ಇಚ್ಛಿಸುವಿರಿ **?**

ಉತ್ತರ : ಸುಳ್ಳು

ಪ್ರಶ್ನೆ **11** : ಪ್ರಾ ಸಾ **12** ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಸಾಕ್ಷಿದಾರರಾದ ದಿವ್ಯ, ಕಾವ್ಯ, ಸುವರ್ಣಮ್ಮ, ಮಂಜುಳಾ ಮತ್ತು ಚಂದ್ರಶೇಖರ್ ರವರ ಹೇಳಿಕೆಗಳನ್ನು ಮಾಡಿಕೊಂಡು, ದಿ.**04.09.2022** ರಂದು ಎಫ್.ಎಸ್.ಎಲ್.ವರದಿಯನ್ನು ಬಾಕಿ ಇಟ್ಟು ತನಿಖೆ ಪೂರ್ಣಗೊಳಿಸಿ, ನಿನ್ನ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣಾ ಪತ್ರವನ್ನು ಸಲ್ಲಿಸಿರುವುದಾಗಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳಲು ಇಚ್ಛಿಸುವಿರಿ **?**

ಉತ್ತರ : ಸುಳ್ಳು

ಪ್ರಶ್ನೆ **12** : ನೀವು ಹೆಚ್ಚಿಗೆ ಏನಾದರೂ ಹೇಳಲು ಇಚ್ಛಿಸುವಿರಾ **?**

ಉತ್ತರ : ಇಲ್ಲ

ಪ್ರಶ್ನೆ **13**: ನಿಮ್ಮ ಪರವಾಗಿ ಯಾರನ್ನಾದರೂ ಸಾಕ್ಷಿ ಮಾಡಲು ಅಥವಾ ದಾಖಲಾತಿಗಳನ್ನು ಹಾಜರು ಮಾಡಲು ಇಚ್ಛಿಸುವಿರಾ **?**

ಉತ್ತರ : ಇಲ್ಲ

(ಬೆರಳಚ್ಚುಗಾರ್ತಿಯಿಂದ ಬೆರಳಚ್ಚು ಮಾಡಿಸಿ, ಈ ಮೇಲ್ಕಂಡ ಪ್ರಶ್ನೆಗಳನ್ನು ಆರೋಪಿಗೆ ಓದಿ ಹೇಳಿ ಆತನು ಅರ್ಥ ಮಾಡಿಕೊಂಡು ನೀಡಿದ ಉತ್ತರಗಳನ್ನು ನನ್ನಿಂದ ನಮೂದಿಸಿಕೊಳ್ಳಲಾಯಿತು).

ಸಹಿ/-

(ಬಿ.ಜಯಂತ ಕುಮಾರ್)

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು

ತುಮಕೂರು

ಸ್ಥಳಃ ತುಮಕೂರು

ದಿನಾಂಕಃ **21.07.2026**